ಅ) ಹೌದು

ಆ) ನ್ಯಾಯಾಯಲಯದ ಕಟ್ಟಡ ನಿರ್ಮಿಸಲು ಸಕಲೇಶಪುರದಲ್ಲಿ ಸರ್ವೆ ನಂ. 164 ರಲ್ಲಿ ಎರಡು ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಸಕಲೇಶಪುರದಲ್ಲಿ ಆರ್. ಎಂ. ಸಿ. ನಿವೇಶನವನ್ನು ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ಯಾವುದೇ ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ.

ಶ್ರೀ ಬಿ.ಆರ್. ಗುರುದೇವ್ : ಮಾನ್ಯ ಅಧ್ಯಕ್ಷರೇ, ನಾನು ಕೇಳಿದಂತಹ ಪ್ರಶ್ನೆಗೆ ಉತ್ತರದಲ್ಲಿ ಕಟ್ಟಡ ಇಲ್ಲ ಎಂದು ತಿಳಿದು ಬಂದಿದೆ ಎಂದು ಹೇಳಿದ್ದಾರೆ. ಸಕಲೇಶಪುರದಲ್ಲಿ ಸರ್ವೆ ನಂಬರ್ 164 ರಲ್ಲಿ ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಸರ್ವೆ ನಂಬರ್ 164ರಲ್ಲಿ ಈಗಾಗಲೇ ತಂದೆ ಮಕ್ಕಳ ಹಿಸ್ಸೆಯಲ್ಲಿ ಕೆಲವೊಂದು ಭೂಮಿಮಾರಾಟ ಆಗಿ ಹೋಗಿದೆ. ಆದ್ದರಿಂದ ನಾನು ಕೊನೆಯ ಪ್ರಶ್ನೆಯನ್ನು ಕೇಳುತ್ತೇನೆ. ಜೆ.ಎಂ.ಎಫ್.ಸಿ.ಗೆ. 10 ಎಕರೆಯಷ್ಟು ಖಾಲಿ ಜಾಗ ಇದೆ. ತಾವು ಜಿಲ್ಲಾ ಮಂತ್ರಿಗಳು, ತಮಗೆ ಗೊತ್ತಿದೆ. ಆ ಜಾಗವನ್ನು ಸುಲಭವಾಗಿ ಸ್ವಾಧೀನಪಡಿಸಿಕೊಳ್ಳಬಹುದು. ಮತ್ತು ತಮ್ಮ ಇಲಾಖೆಗೆ ಬೇಕಾದಂತಹ ಒಂದು ಕಟ್ಟಡವನ್ನು ನಿರ್ಮಾಣ ಮಾಡುವುದಕ್ಕೆ ಸುಲಭ ಆಗುತ್ತದೆ. ಇದರ ಬಗ್ಗೆ ತಾವು ಆಶ್ವಾಸನೆ ಕೊಡಬೇಕು ಎಂದು ಕೇಳುತ್ತಿದ್ದೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಸಕಲೇಶ್ವರಪುರಕ್ಕೆ ನಮ್ಮ ಶಾಸಕರ ಜೊತೆಯಲ್ಲಿ ಹೋಗಿ ಸ್ಥಳವನ್ನು ನೋಡಿ ಅಲ್ಲಿಯೇ ತೀರ್ಮಾನ ಕೊಟ್ಟು ಬರುತ್ತೇನೆ.

ಶ್ರೀ ಬಿ.ಆರ್. ಗುರುದೇವ : ತುಂಬಾ ಸಂತೋಷ.

ಬೇಡ್ತಿ ಜಲವಿದ್ಯುತ್ ಯೋಜನೆ ಮತ್ತು ಶರಾವತಿ ಟೇಲ್ ರೇಸ್ ಯೋಜನೆ

480- ಶ್ರೀ ಆರ್. ಎನ್. ನಾಯ್ಕ್ (ಭಟ್ಕಳ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಡ್ತಿ ಜಲವಿದ್ಯುತ್ ಯೋಜನೆ ಮತ್ತು ಶರಾವತಿ ಟೇಲ್‌ರೇಸ್ ಯೋಜನೆಯನ್ನು ಕಾರ್ಯಗತಗೊಳಿಸಲು ತೊಂದರೆಏನಾದರೂ ಇದೆಯೇ?

ಆ) ಹಾಗಿದ್ದಲ್ಲಿ ಅವು ಯಾವುವು?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):

ಅ) ಹೌದು

ಆ) (1) ಬೇಡ್ತಿ ಯೋಜನೆ :

1) ದಿ: 3-2-92ರ ರಾಜ್ಯ ಸರ್ಕಾರದ ಆದೇಶದ ಮೇರೆಗೆ ಪರಿಷ್ಕೃತ ಜಲಾಶಯದ ಮಟ್ಟ 1540 ಅಡಿಗಳಿಗೆ ನಿಗದಿ ಪಡಿಸಿದ ಬೇಡ್ತಿ ಯೋಜನೆಯ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಯಿತು. ಆದರೂ ಅವುಗಳನ್ನು ಈ ಕೆಳಗಿನ ಕಾರಣಗಳಿಂದ ಮುಂದೂಡಲಾಯಿತು.

ಕೇಂದ್ರ ಸರ್ಕಾರದ ಪರಿಸರ ಇಲಾಖೆಯು ಪರಿಷ್ಕೃತ ಬೇಡ್ತಿ ಯೋಜನೆಗೆ ಪರಿಸರಾತ್ಮಕ ಅನುಮೋದನೆಯನ್ನು ಪಡೆದುಕೊಳ್ಳುವವರೆಗೆ ಸದರೀ ಕಾಮಗಾರಿಗಳನ್ನು ನಿಲ್ಲಿಸಬೇಕು ಎಂದು ದಿ: 16-10-92 ರ ತನ್ನ ಪತ್ರದಲ್ಲಿ ನಿಗಮಕ್ಕೆ ಆದೇಶ ನೀಡಿರುತ್ತದೆ.

ಬ) ಬೇಡ್ತಿ ಮತ್ತು ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಎಂಬ ಸಂಘಟನೆ ಬೇಡ್ತಿ ಯೋಜನೆಯ ಅನುಷ್ಠಾನದ ವಿರುದ್ಧ ಸಾರ್ವಜನಿಕ ಹಿತಾಸಕ್ತಿಯ ದಾವೆಯನ್ನು ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ದಾಖಲು ಮಾಡಿರುವುದರಿಂದ ಬೇಡ್ತಿ ಯೋಜನೆಯನ್ನು

ಕರ್ನಾಟಕ ವಿದ್ಯುತ್ ನಿಗಮವೇ ಕಾರ್ಯಗತಗೊಳಿಸಬೇಕೇ ಅಥವಾ ಖಾಸಗೀ ಸಂಸ್ಥೆಗೆ ವಹಿಸಬೇಕೇ ಎಂಬ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

2) ಶರಾವತಿ ಟೇಲರೇಸ್ :

ರಾಜ್ಯ ಉಚ್ಚನ್ಯಾಯಾಲಯದ ಆದೇಶದಂತೆ ಕೇಂದ್ರ ಸರ್ಕಾರದ ಇಲಾಖೆಯಿಂದ ಯೋಜನೆಯನ್ನು ಪುನರ್ ಪರಿಶೀಲಿಸಿ ನೀಡಬೇಕಾಗಿರುವ ಅನುಮೋದನೆಯು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಆರ್.ಎನ್. ನಾಯಕ್ : ಮಾನ್ಯ ಅಧ್ಯಕ್ಷರೆ, ಈ ಟೇಲ್ ರೇಸ್ ಯೋಜನೆಯಲ್ಲಿ ಈ ತನಕ ಅಲ್ಲಿ ಎಷ್ಟು ಹಣ ಖರ್ಚಾಗಿದೆ ಎನ್ನುವುದನ್ನು ತಿಳಿಸಬೇಕು. ಅದರ ನಂತರ ಈಗ ಸ್ಟೇ ಬಂದಿದೆ ಎಂದು ಉತ್ತರ ಬಂದಿದೆ. ಮೊದಲಿನಿಂದ ಸರ್ಕಾರದಿಂದ ಅದೇ ಉತ್ತರ ಬರುತ್ತಿದೆ ಅಲ್ಲಿ ಮರಗಳನ್ನು ಕಡಿಯಬಾರದು ಎಂದು ಸ್ಟೇ ಬಂದಿತ್ತೋ ಅಥವಾ ಉಳಿದ ಡ್ಯಾಮ್ ಕಟ್ಟುವುದಕ್ಕೆ ಪೂರಕವಾದ ಉಳಿದ ಯಾವುದೇ ಕೆಲಸವನ್ನು ಮಾಡಬಾರದು ಎಂದು ಸ್ಟೇ ಬಂದಿತ್ತೋ ಎನ್ನುವುದನ್ನು ಸಾರ್ವಜನಿಕರಿಗೆ ತಿಳಿಸಬೇಕಾಗುತ್ತದೆ. ಇದು ಕುತೂಹಲಕಾರಿಯಾದ ವಿಚಾರವೂ ಹೌದು. ಮತ್ತು ಸಾರ್ವಜನಿಕರ ಹಿತಾಸಕ್ತಿಯ ವಿಚಾರವೂ ಆಗಿರುತ್ತದೆ. ಅದರ ನಂತರ ಈ ಸ್ಟೇ ಮಾಡುವುದಕ್ಕೆ ಯಾವುದೋ ಸಂಸ್ಥೆಯನ್ನು ಕೆಲಸ ಮಾಡಿದರು ಎಂದು ಹೇಳಿದ್ದಾರೆ. ಇದಕ್ಕೆ ಅಧ್ಯಕ್ಷರು ಯಾರು? ಈ ಸ್ಟೇ ವಿಚಾರದಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂದು ತಿಳಿಸಬೇಕು. ಏಕೆಂದರೆ ಕೋರ್ಟ್‌ಗಳ ಬಗ್ಗೆ ನಾನು ತಿಳಿದುಕೊಂಡಿದ್ದೇನೆ. ಭಾರತ ದೇಶದಲ್ಲಿರುವ ಎಲ್ಲಾ ಕೋರ್ಟುಗಳು ಸಾರ್ವಜನಿಕರ ಹಿತಾಸಕ್ತಿಯನ್ನು ಬಿಟ್ಟು ಹೋಗುವಂತಹ ವ್ಯವಸ್ಥೆಯನ್ನು ಹೊಂದಿಲ್ಲ. ಅವು ಇಂಡಿಪೆಂಡೆಂಟ್ ಬಾಡಿ ಇರಬಹುದು. ನಾವು ಮಾತನಾಡುವುದು ಸಹ ಇಂಡಿಪೆಂಡೆಂಟ್ ಇದ್ದೇವೆ. ಅದು ಸಾರ್ವಜನಿಕರ ಹಿತಾಸಕ್ತಿಯನ್ನು ಬಿಟ್ಟು ಹೋಗಿಲ್ಲ. ಬಹುಶಃ ಸರ್ಕಾರ ಸರಿಯಾಗಿ ವಕೀಲರನ್ನು ಇಟ್ಟು ಅಥವಾ ಬೇಗ ಬೇಗ ಇಂಟರಿಮ್ ಆಪ್ಲಿಕೇಶನ್ ಹಾಕಿ ಅದು ಬೇಗ ಮುಗಿಯುವುದಕ್ಕೆ ಪ್ರಯತ್ನ ಮಾಡದೇ ಇರುವುದರಿಂದ ಕೋರ್ಟುಗಳು ತೀರ್ಮಾನವನ್ನು ಕೊಡುವುದಕ್ಕೆ ಬಹಳ ದಿಲೇ ಮಾಡುತ್ತಿವೆ ಎಂದು ನಾನು ಭಾವಿಸಿದ್ದೇನೆ.

ಇನ್ನೊಂದು ಪ್ರಶ್ನೆಗೆ ಉತ್ತರದಲ್ಲಿ ಕೇಂದ್ರ ಸರ್ಕಾರ ಸ್ಟೇ ಮಾಡಿದೆ, ಅನುಮತಿ ಕೊಡಬೇಕೆಂದು ಹೇಳಿದ್ದೀರಿ. ಕೇಂದ್ರ ಸರ್ಕಾರದಲ್ಲಿ ಸ್ಟೇ ವೆಕೇಟ್ ಮಾಡಲಿಕ್ಕೆ ನಿಮ್ಮ ಯಾವ ಅಧಿಕಾರ ಪ್ರಯತ್ನ ಮಾಡುತ್ತಿದ್ದಾರೆ ಮತ್ತು ಅದು ಯಾವ ಹಂತದಲ್ಲಿದೆ ಎನ್ನುವುದನ್ನು ಕೂಲಂಕುಷವಾಗಿ ಸಾರ್ವಜನಿಕರಿಗೆ ತಿಳಿಸಬೇಕು ಬೇಡ್ತಿ ಯೋಜನೆ ಮತ್ತು ಟೇಲ್‌ರೇಸ್ ಯೋಜನೆ ಏನಿದೆ ಇದು ಆಗಲೇ ಬೇಕೋ ಅಥವಾ ಬೇಡವೋ ಎನ್ನುವ ಬಗ್ಗೆ ಸರ್ಕಾರದ ತೀರ್ಮಾನವನ್ನು ತಿಳಿಸಬೇಕು. ಸರ್ಕಾರದ ಮನಸ್ಸು ಏನಿದೆ ಎನ್ನುವುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಈ ಬೇಡ್ತಿ ಯೋಜನೆಯ ಬಗ್ಗೆ ಒಂದು ದೊಡ್ಡ ಇತಿಹಾಸ ಇದೆ. 1979ನೇ ಇಸವಿಯಲ್ಲಿ ಇದಕ್ಕೆ ಮಂಜೂರಾತಿ ಸಿಕ್ಕಿದಾಗ 380 ಕೋಟಿ ರೂಪಾಯಿಗಳ ಈ ಯೋಜನೆ ಇದು. ಸುಮಾರು 210 ಮೆಗೋವ್ಯಾಟ್ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡತಕ್ಕಂಥ ಅಂದಾಜಾಗಿದೆ. ಖರ್ಚಾಗಿರತಕ್ಕಂಥ ಹಣ 9 ಕೋಟಿ ರೂಪಾಯಿ. 1979ರಲ್ಲಿ ಕೇಂದ್ರ ಸರ್ಕಾರದವರು ಇದಕ್ಕೆ ಕ್ಲಿಯರೆನ್ಸ್‌ನ್ನು ಕೊಟ್ಟರು. ಆದರೆ 1980ನೇ ಇಸವಿಯಲ್ಲಿ ಒಂದು ಸ್ಥಳೀಯ ಚಳುವಳಿ ಬೇಡ್ತಿ ಯೋಜನೆಗೆ ಪ್ರಾರಂಭವಾಯಿತು. ಆ ಚಳುವಳಿ ಪ್ರಾರಂಭವಾದಂತಹ ಕಾಲದಲ್ಲಿ 1981ರಲ್ಲಿ ಈ ಯೋಜನೆಯ ಅನುಷ್ಠಾನ ಕುರಿತಂತೆ ಅಧ್ಯಯನ ನಡೆಸಲು

ತಜ್ಞರಾದಂತಹ ಶ್ರೀ ಹೆಚ್.ಬಿ. ನಾರಾಯಣ ರಾವ್ ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಆ ಸಮಿತಿಯವರು ವರದಿಯನ್ನು ಕೊಟ್ಟರು. ಆ ಸಮಿತಿಯ ವರದಿಯ ಪ್ರಕಾರ ಹಿಂದೆ ವರ್ಚಿನಲ್ ಪ್ರಾಜೆಕ್ಟ್ ಪ್ರೊ ಫೈಲ್ ಪ್ರಕಾರ ಹೈಟ್ ಆಫ್ ದಿ ಡ್ಯಾಂ 1570 ಅಡಿಗಳಿಂದ 1540 ಅಡಿಗಳಿಗೆ ಇಳಿಸಬೇಕು, ಇದರಿಂದ ಮುಳುಗಡೆಯಾಗತಕ್ಕಂಥ ಪ್ರದೇಶ 9800ಕ್ಕೆ ಬದಲಾಗಿ 6065 ಹೆಕ್ಟೇರ್ ಮತ್ತು ಸಂತ್ರಸ್ತಗೊಳ್ಳುವ ಜನಸಂಖ್ಯೆ 3706 ರಿಂದ 2495ಕ್ಕೆ ಇಳಿಯುತ್ತದೆಂದು ಡಾ : ನಾರಾಯಣರಾವ್ ಅವರು ವರದಿಯನ್ನು ಕೊಟ್ಟರು. ಆದರೆ ಸ್ಟೇಟ್‌ಗೌರ್ನಮೆಂಟ್‌ನವರು 1992ರಲ್ಲಿ 1540 ಅಡಿ ಎತ್ತರದ ಡ್ಯಾಂಗೆ ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಅದರ ಪ್ರಕಾರ ಟೆಂಡರ್ಸ್‌ನ್ನು ಕರೆಯಲಾಗಿದೆ. ಈ ಮಧ್ಯೆ ಬೇಡ್ತಿ ಮತ್ತು ಆಘನಾಶಿನಿ ಪ್ರೊಟೆಕ್ಷನ್ ಕಮಿಟಿಯವರು ಕರ್ನಾಟಕ ಹೈಕೋರ್ಟಿನಲ್ಲಿ 1992ನೇ ಇಸವಿಯಲ್ಲಿ ದಾವೆ ಹೂಡಿದರು. ಕೇಂದ್ರ ಪರಿಸರ ಇಲಾಖೆಯಿಂದ ರೀವ್ಯೂ ಮಾಡಿ Environmental Impact Assessment Report, 1992 ರ ಅಕ್ಟೋಬರ್‌ನಲ್ಲಿ ಬಂತು. ಈ ಮಧ್ಯೆ ಒಂದು Memorandum of Understanding ಅನ್ನು ಯಾವ ಸಂಸ್ಥೆಯ ಜೊತೆಯಲ್ಲಿ ನಾವು ಮಾಡಿಕೊಂಡಿದ್ದೆವು ಅದನ್ನು ಬಿಡಬೇಕೆಂದು ಮಾರ್ಚ್ 1993ರಲ್ಲಿ ಕರ್ನಾಟಕ ಸರ್ಕಾರ ತೀರ್ಮಾನವನ್ನು ತೆಗೆದುಕೊಂಡಿತು. ಇದರ ಜೊತೆಗೆ ಕೇಂದ್ರ ಪರಿಸರ ಇಲಾಖೆಯೂ ಕೂಡ, ಕೇಂದ್ರ ಸರ್ಕಾರದ ಪರಿಸರಾತ್ಮಕ ಅನುಮೋದನೆಯನ್ನು ಮತ್ತೆ ಪಡೆದುಕೊಳ್ಳುವವರೆಗೆ ಸದರಿ ಯೋಜನೆಯ ಕಾಮಗಾರಿಗಳನ್ನು ನಿಲ್ಲಿಸಬೇಕೆಂದು ನಿಗಮಕ್ಕೆ ತಿಳಿಸಿರುತ್ತದೆ. ಅದುದರಿಂದ ಈ ಬಗ್ಗೆ ಏನು ಟೆಂಡರ್‌ಗಳನ್ನು ಕರೆದಿದ್ದೇವೆ ಅದು it is now for the time being frozen.

ಶ್ರೀ ಆರ್.ಎನ್. ನಾಯಕ್ : ಕೇಂದ್ರ ಸರ್ಕಾರಕ್ಕೂ ಸಹ ರಾಜ್ಯ ಸರ್ಕಾರದ ವಿದ್ಯುಚ್ಛಕ್ತಿ ವಿಚಾರದಲ್ಲಿ ಎಚ್ಚರ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮತ್ತು ಈ ವಿದ್ಯುತ್ತಿನ ಕೊರತೆಯನ್ನು ಈ ಕರ್ನಾಟಕ ಸರ್ಕಾರ ಇಷ್ಟೆಲ್ಲಾ ದೊಡ್ಡ ಪ್ರಮಾಣದಲ್ಲಿ ಅನುಭವಿಸುತ್ತಾ ಇರುವಾಗ ಇನ್ನು ಮುಂದಿನ ಭವಿಷ್ಯದಲ್ಲಿ ಇದು ಬಹಳ ತೊಂದರೆಗೆ ಒಳಗಾಗುವಂತಹ ಪರಿಸ್ಥಿತಿ ಸಂದರ್ಭ ಇರುವಾಗ ಕೇಂದ್ರ ಸರ್ಕಾರದ ಈ ಇಲಾಖೆ ಅದಷ್ಟು ಬೇಗ, ಇದರ ಬಗ್ಗೆ ಕ್ಲಿಯರ್ ಮಾಡುವುದಕ್ಕೆ ಅವರ ಮನಸ್ಸನ್ನು ಒಲಿಸುವುದಕ್ಕೆ ತಾವೇನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ, ಯಾವ್ಯಾವ ಅಧಿಕಾರಿಯನ್ನು ಅಲ್ಲಿ ಕಳುಹಿಸಿದಿರಿ, ಅಥವಾ ಕೇಂದ್ರ ಸರ್ಕಾರಕ್ಕೆ ಇದು ಬೇಡದೇ ಹೋಗಿದ್ದರೆ ನಮಗೆ ಬೇರೆ ಯಾವ ಮೂಲದಿಂದ ಶಕ್ತಿಯನ್ನು ಉತ್ಪನ್ನ ಮಾಡುವುದಕ್ಕೆ ಕೇಂದ್ರ ಸರ್ಕಾರ ಸಹಾಯ ಮಾಡುತ್ತದೆ. ಅಥವಾ ಕೋರ್ಟಿನಿಂದ ಸ್ಟೇ ತರುತ್ತಾರೋ ಅಥವಾ ಕೋರ್ಟು ಏನು ಸ್ಟೇ ಕೊಡುತ್ತದೆ, ಇದರ ಬಗ್ಗೆ ಏನು ತೀರ್ಮಾನ ಮಾಡುತ್ತಾರೆ ಅಥವಾ ಈ ಬಗ್ಗೆ ಬೇರೆ ದಾರಿ ಏನಾದರೂ ತೋರಿಸಿಕೊಡುತ್ತಾರೆಯೇ ಹೇಗೆ? ಈ ದಿಸೆಯಲ್ಲಿ ಹೇಗೆ? ತಾವು ಕೋರ್ಟಿಗೆ ಒಂದು ಅಪ್ಲಿಕೇಷನ್ ಅನ್ನು ಕೊಡಿ ಯಾರು ಕೋರ್ಟಿಗೆ ಹೋಗಿ ಸ್ಟೇ ತರುತ್ತಾರೋ ಅವರಿಗೆ ಸೂಚನೆ ಕೊಡಿ ಎನ್ನುವ ಅಪ್ಲಿಕೇಷನ್ ಅನ್ನು ತಾವು ಏಕೆ ಕೋರ್ಟಿಗೆ ಸಲ್ಲಿಸಬಾರದು? ಅಥವಾ ಕೇಂದ್ರ ಸರ್ಕಾರಕ್ಕೆ ಏಕೆ ಕೊಡಬಾರದು? ಏಕೆಂದರೆ, ಇದು ಅತ್ಯಂತ ಪ್ರಾಮುಖ್ಯವಾದಂಥ ವಿಚಾರ. ಕರ್ನಾಟಕ ರಾಜ್ಯದ ಅಭಿವೃದ್ಧಿಯೇ ಕುಂಠಿತಗೊಳ್ಳುವ ಸಂದರ್ಭ ಇದಾಗಿರುವುದರಿಂದ ಈ ಕಡೆ ಮತ್ತು ಆ ಕಡೆ ಕುಳಿತ ಎಲ್ಲಾ ಸದಸ್ಯರೂ ಈ ದಿಸೆಯಲ್ಲಿ ಸರಿಯಾದ ಪ್ರಯತ್ನ ಮಾಡದೆಹೋದರೆ ಭವಿಷ್ಯದಲ್ಲಿ ಬಹಳ ತೊಂದರೆ ಎದುರಿಸಬೇಕಾಗುತ್ತದೆಂಬುದನ್ನು ತಾವೆಲ್ಲರೂ ಮನಗಂಡು, ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕುರಿತು ವಿಶೇಷ ಮುತುವರ್ಜಿ

ವಹಿಸಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಈ ಬಗ್ಗೆ ತಮ್ಮ ಹೇಳಿಕೆ ಏನು? ಹಾಗೆಯೇ ಶರಾವತಿ ಟೇಲ್‌ರೇಸ್ ಬಗ್ಗೆ ತಾವು ಹೇಳಿಲ್ಲವಾದ್ದರಿಂದ, ಅದರ ಬಗ್ಗೆಯೂ ಹೇಳಬೇಕು.

ಶ್ರೀ ಎಸ್.ಎಂ. ಕೃಷ್ಣ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾಗಿರತಕ್ಕಂಥ ಶ್ರೀ ನಾಯಕ್‌ರವರಿಗೆ ಈಗಾಗಲೇ ತಿಳಿದಿರುವಂತೆ ಪರಿಸರವಾದಿಗಳ ಚಳುವಳಿ ಕೇವಲ ನಮ್ಮ ರಾಜ್ಯಕ್ಕೆ, ನಮ್ಮ ದೇಶಕ್ಕೆ ಸೀಮಿತವಾಗಿರದೆ ಇಡೀ ವಿಶ್ವದಾದ್ಯಂತ ವ್ಯಾಪಿಸಿರುವ ಸಂಗತಿಯಾಗಿದೆ. ಪರಿಸರವಾದದ ಬಗ್ಗೆ ಅಗಾಧವಾದಂಥ ಕಾಳಜಿ ಮತ್ತು ಆಸಕ್ತಿ ಬಂದಿರತಕ್ಕಂಥ ಹಿನ್ನೆಲೆಯಲ್ಲಿ ಬೇಡ್ತಿ ಯೋಜನೆ ವಿಚಾರದಲ್ಲಿ ನಾವು ಏನು ತೀರ್ಮಾನಗಳನ್ನು ತೆಗೆದುಕೊಂಡಿದ್ದೆವೋ ಅದನ್ನು ನಾವು ಮನಸ್ಸಿನಲ್ಲಿಯೇ ಇಟ್ಟುಕೊಂಡು ಮುಂದುವರೆಯಬೇಕಾಗುತ್ತದೆ. ಜೊತೆಗೆ ಬೇಡ್ತಿ ಯೋಜನೆ ವಿಚಾರ ಕೇಂದ್ರ ಸರ್ಕಾರದ ಪರಿಸರ ಇಲಾಖೆಯವರ ಬಿಗಿ ಮುಷ್ಠಿಯಲ್ಲಿರುವುದರಿಂದ ನಾವು ಅವರ ಮನವೊಲಿಸುವುದಕ್ಕೇನಾದರೂ ಪರ್ಯಾಯ ಹುಡುಕಿ, ಸದರಿ ಯೋಜನೆಯಿಂದ ಮುಳುಗಡೆಯಾಗತಕ್ಕಂಥ ಪ್ರದೇಶ ಮತ್ತು ಕುಟುಂಬಗಳು ಇವೆರಡರ ಪ್ರಮಾಣವನ್ನು ಇನ್ನೂ ಕಡಿಮೆ ಮಾಡುವ ಯಾವುದಾದರೊಂದು ಪರ್ಯಾಯ ಯೋಜನೆ ಇದೆಯೇ? ಎನ್ನುವುದರ ಕುರಿತು ರಾಜ್ಯ ಸರ್ಕಾರ ಆಲೋಚಿಸುತ್ತಿದೆ. ಈಗೆ ಕೆಲವು ದಿವಸಗಳ ಹಿಂದೆ ಆ ಪ್ರದೇಶದ ಪರಿಸರವಾದಿಗಳು ಮತ್ತು ಹೋರಾಟ ಸಮಿತಿಯವರು ನನ್ನನ್ನು ಭೇಟಿಯಾಗಿದ್ದರು. ಅವರು ಮಾತನಾಡಿ ಬೇಡ್ತಿ ಯೋಜನೆಗೆ ಸಂಬಂಧಪಟ್ಟಂತೆ ಒಂದು ಪರ್ಸ್‌ಪೆಕ್ಟಿವ್ ಪ್ಲಾನ್ ಕಳುಹಿಸಿಕೊಡುವುದಾಗಿ ಹೇಳಿದ್ದಾರೆ. ಅವರು ಅದನ್ನು ಕಳುಹಿಸಿ ಕೊಟ್ಟಾಗ ನಾವು ಅದರ ಬಗ್ಗೆ ವಿಚಾರ ಮಾಡುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ : ಈ ಬೇಡ್ತಿ ಯೋಜನೆಗೆ ಯೋಜನಾ ಆಯೋಗದ ಕ್ಲಿಯರೆನ್ಸ್ ಇಲ್ಲದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಸಿ. ಬೈರೇಗೌಡ : ಕೃಷ್ಣರಾಜಸಾಗರಕ್ಕೆ ಯೋಜನಾ ಆಯೋಗದಿಂದ ಅಪ್ರೂವಲ್ ಇಲ್ಲವೆಂದ ಮೇಲೆ ಈ ಯೋಜನೆಗೇಕೆ ಬೇಕು?

ಶ್ರೀ ಆರ್.ಎನ್. ನಾಯಕ್ : ದೇಶಪಾಂಡೆಯವರೆ, ನಿಮಗೆ ಬೇಡ್ತಿ ಯೋಜನೆ ಬೇಕೇ? ಅಥವಾ ಬೇಡವೇ? ಎಂಬುದನ್ನು ಹೇಳಿರಿ. ನೀವು ಈ ವಿಚಾರಕ್ಕೆ ಒತ್ತು ಕೊಟ್ಟು ಮಾತನಾಡಿ. ಇಂತಹ ಪರಿಸ್ಥಿತಿಯಲ್ಲಿ ರಾಜ್ಯಕ್ಕೆ ಬೇಡ್ತಿ ಯೋಜನೆ ಅವಶ್ಯಕವಾಗಿ ಬೇಕಾಗಿರುವುದರಿಂದ ಈ ಯೋಜನೆ ಬೇಕೆಂದು ನಾನು ಹೇಳುತ್ತಿದ್ದೇನೆ. ಇದರ ಬಗ್ಗೆ ಅಡ್ಡ ಗೋಡೆ ಮೇಲೆ ದೀಪವಿಟ್ಟಂತೆ ಪರೋಕ್ಷವಾಗಿ ಹೇಳುವುದರಲ್ಲಿ ಯಾವುದೇ ಅರ್ಥವಿಲ್ಲ. ಈ ವಿಚಾರದಲ್ಲಿ ನಿಮ್ಮ ಮೇಲೆ ನನ್ನ ಆಪಾದನೆ ಇದೆ. ರಾಜ್ಯದ ಅಭಿವೃದ್ಧಿ ವಿಚಾರದಲ್ಲಿ ನೀವು ಈ ಯೋಜನೆ ಬೇಡ ಎನ್ನುವವರು.

ಶ್ರೀ ಆರ್.ವಿ. ದೇಶಪಾಂಡೆ : ಮೊದಲನೆಯದಾಗಿ, ಈ ಯೋಜನೆಗೆ ಯೋಜನಾ ಆಯೋಗದ ಕ್ಲಿಯರೆನ್ಸ್ ಇಲ್ಲದಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಎರಡನೆಯದಾಗಿ, ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಶ್ರೀ ಗುಂಡೂರಾವ್ ಅವರು, ಶ್ರೀ ರಾಮಕೃಷ್ಣ ಹೆಗಡೆಯವರು ಮತ್ತು ನಾನು ಸ್ವತಃ ಭಾರತ ಸರ್ಕಾರದ ಪರಿಸರ ಖಾತೆಯ ಮಂತ್ರಿಗಳಾದ ಶ್ರೀ ಕಮಲನಾಥ್ ಅವರನ್ನು ಭೇಟಿಯಾದಾಗ, ಈ ಯೋಜನೆಗೆ ಪರಿಸರ ಸಚಿವಾಲಯದ ಕ್ಲಿಯರೆನ್ಸ್ ಇಲ್ಲ. ಎಂದು ಹೇಳಿದರು. ಹೀಗಿದ್ದರೂ, ಆ ಸಮಯದಲ್ಲಿ ಈ ಬೇಡ್ತಿ ಯೋಜನೆಯ ಅನುಷ್ಠಾನಕ್ಕಾಗಿ ಟೆಂಡರ್ ಕರೆದಿರಲ್ಲ, ಅದನ್ನು ತೆಗೆಯಬಾರದು....

ಶ್ರೀ ಆರ್.ಎನ್. ನಾಯಕ್ : ಇದನ್ನು ಬಂಗಾರಪ್ಪನವರ ಸರ್ಕಾರವಿದ್ದಾಗ ಮಾಡಿದ್ದುದು ಎನ್ನುವ ಒಂದೇ ಕಾರಣಕ್ಕಾಗಿ ನೀವು....

(ಗೊಂದಲ)

ಶ್ರೀ ಆರ್.ಎನ್. ನಾಯಕ್ : ಈ ಯೋಜನೆಯನ್ನು ಬಂಗಾರಪ್ಪನವರ ಸರ್ಕಾರವಿದ್ದಾಗ ಮಾಡಲಾಯಿತು ಎನ್ನತಕ್ಕ ಒಂದೇ ಒಂದು ಕಾರಣದಿಂದ ಇದನ್ನು ಬೇಡವೆಂದು ಹೇಳುತ್ತಿದ್ದಾರೆ. ಇದನ್ನು ಸ್ಥಗಿತಗೊಳಿಸಬೇಕೆಂಬುದೇ ಅವರ ಉದ್ದೇಶವಾಗಿದೆ ಎಂದು ನಾನು ನೇರವಾಗಿ ಆರೋಪ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು : ತಾವು ಕುಳಿತುಕೊಳ್ಳಿ, ಅವರು ಮೊದಲು ಏನು ಹೇಳುತ್ತಾರೋ ಅದನ್ನು ಕೇಳಿ, ಅನಂತರ ಬೇಕಾದರೆ ಮಾತನಾಡಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ನನ್ನ ಮೂರನೇ ಸರಳವಾದ ಪ್ರಶ್ನೆ ಏನೆಂದರೆ, ಆ ಯೋಜನೆ ಜಾರಿಗೆ ಬರಬೇಕು, ಇವತ್ತು ಫವರ್ ಉತ್ಪಾದನೆಯಾಗಬೇಕು, ಅದನ್ನು ನಾನು ವಿರೋಧ ಮಾಡುತ್ತಿಲ್ಲ. ಏಕೆಂದರೆ entire developments of the World or country ಆಗಲಿ ಅದು ಪವರ್ ಮೇಲೆ ಅವಲಂಬಿಸಿದೆ. ಇದು ಕೃಷಿ ಮಾಧ್ಯಮವಿರಬಹುದು ಅಥವಾ ಕೈಗಾರಿಕೆಯಲ್ಲಿ ಅಭಿವೃದ್ಧಿ ಸಾಧಿಸಲು ಇರಬಹುದು, ಯಾವುದೇ ಇದ್ದರೂ ಸಹ ಆ ದೇಶ ಪವರ್ ಮೇಲೆ ಹೆಚ್ಚು ಅವಲಂಬನೆಯಾಗಿರುತ್ತದೆ. ಆದ್ದರಿಂದ ನಾನು ಏನು ಸೂಚನೆ ಮಾಡುತ್ತಿದ್ದೇನೆಂದರೆ, ಬೇಡ್ತಿ ಯೋಜನೆಯನ್ನು ಒಂದು ರೀತಿ Multipurpose project ಎಂದು ಮಾಡಿ Irrigation, power generation and tourism ಮಾಡಲು ಸಾಧ್ಯವಿದೆ ಎಂದು ಸರ್ಕಾರಕ್ಕೆ ಈಗಾಗಲೇ ವರದಿಯೂ ಸಹ ಕೊಟ್ಟಿದ್ದಾರೆ. ಇದರಿಂದ ಯಾವ ಪುನರ್ವಸತಿಗೂ ತೊಂದರೆ ಬರುವುದಿಲ್ಲ ಎಂದು ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ತಾವು ಪರಿಶೀಲನೆ ಮಾಡುತ್ತೀರಾ? ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಸ್.ಎಂ. ಕೃಷ್ಣ : ಸನ್ಮಾನ್ಯ ಅಧ್ಯಕ್ಷರೆ, ರೆಕಾರ್ಡ್‌ನ್ನು ಸ್ವಲ್ಪ ಮಟ್ಟಿಗೆ ಸರಿಪಡಿಸಬೇಕೆನ್ನತಕ್ಕ ದೃಷ್ಟಿಯಿಂದ ನಾನು ಹೇಳುವುದೇನೆಂದರೆ, ಈ ಯೋಜನೆಗೆ ಹೈಕೋರ್ಟ್‌ನಿಂದ ಸ್ಟೇ ಸಿಕ್ಕಿಲ್ಲ. ಬರೇ ಇದರ ಬಗ್ಗೆ ಹೈಕೋರ್ಟ್‌ನಲ್ಲಿ ದಾವೆಯನ್ನು ಹೂಡಿದ್ದಾರೆ. ಆದರೆ ಕೇಂದ್ರದ ಪರಿಸರ ಇಲಾಖೆಯಿಂದ ಇದಕ್ಕೆ ತಡೆಯಾಜ್ಞೆ ಬಂದಿದೆ.

ಶ್ರೀ ಆರ್.ಎನ್. ನಾಯಕ್ : ನಿಮ್ಮ ಉತ್ತರ ಸರಿಯಾಗಿದೆ. ಈ ಯೋಜನೆಗೆ ಹೈಕೋರ್ಟ್‌ನಿಂದ ತಡೆಯಾಜ್ಞೆ ಸಿಕ್ಕಿಲ್ಲ. ಬಂಗಾರಪ್ಪನವರ ಸರ್ಕಾರವಿದ್ದಾಗ ಇದನ್ನು ಕೈಗೆತ್ತಿಕೊಳ್ಳಲಾಯಿತು, ಈಗ ವೀರಪ್ಪ ಮೊಯಿಲಿಯವರ ಸರ್ಕಾರವಿದೆ. ಈ ಯೋಜನೆಯನ್ನು ಕಾರ್ಯರೂಪಕ್ಕೆ ತಂದರೆ ಎಲ್ಲಿ ಒಳ್ಳೆಯ ಹೆಸರು ಸರ್ಕಾರಕ್ಕೆ ಬರುತ್ತದೆ ಎನ್ನತಕ್ಕ ಕಾರಣದಿಂದ ಇದನ್ನು ತಡೆಯಲು ಸತತ ಪ್ರಯತ್ನ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್.ಎಂ. ಕೃಷ್ಣ : ಆ ರೀತಿಯಲ್ಲಿ ಕೇಂದ್ರದ ಪರಿಸರ ಇಲಾಖೆಯವರು ಇದನ್ನು ನಿಲ್ಲಿಸಬೇಕೆಂದು ಹೇಳಿದ ನಂತರ ನಾವು ಇದರ ಟೆಂಡರ್ ಪ್ರಸ್ತಾವನೆಯನ್ನು ಸ್ಥಗಿತಗೊಳಿಸಿದ್ದೇವೆ. ಈ ಯೋಜನೆಗೆ 2-4-1979ರಲ್ಲಿ ಪ್ಲಾನಿಂಗ್ ಕಮೀಷನ್‌ನಿಂದ ಕ್ಲಿಯರೆನ್ಸ್ ಸಿಕ್ಕಿದೆ Revision in the Project parameters, high reduction, sub-marine augle, Revised price ಪ್ರಶ್ನೆ ಬಂದಾಗ ನಾವು ಪುನಃ ಕೇಂದ್ರ ಸರ್ಕಾರದ ಮುಂದೆ ಹೋಗಬೇಕಾಗಿ ಬಂತು. For revised clearance of environmental ministry that is where we got struck. ಕೇಂದ್ರ ಪರಿಸರ ಇಲಾಖೆಯವರು ಪೂರ್ಣವಾಗಿ ಎನ್‌ವಿರಾನ್‌ಮೆಂಟಲ್ ಆಂಗಲನ್ನು ಅಧ್ಯಯನ ಮಾಡುವವರೆಗೆ ಈ ಯೋಜನೆಯನ್ನು

ತೆಗೆದುಕೊಳ್ಳಬೇಡಿ ಎಂದು ಹೇಳಿದ್ದಾರೆ. ತಾವು ಈಗ ಇದಕ್ಕೆ ಪರ್ಯಾಯವಾಗಿ Multipurpose project ನ್ನು ಮಾಡುವುದರಿಂದ ಪರಿಸರದ ಮೇಲೆ ಯಾವುದೇ ದುಷ್ಪರಿಣಾಮವಾಗುವುದಿಲ್ಲ ಮತ್ತು ಪುನರ್ವಸತಿ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳುತ್ತಿದ್ದೀರಿ. ಇದರ ಬಗ್ಗೆ ವಿಶ್ವಬ್ಯಾಂಕ್‌ನಲ್ಲಿ ಕೆಲಸಮಾಡಿ ಅನುಭವವನ್ನು ಪಡೆದಿರತಕ್ಕ ಡಾ : ಶೆಲ್ವರಾಜ್‌ರವರು ನನ್ನನ್ನು ಭೇಟಿ ಮಾಡಿ ಇದಕ್ಕೆ ಪರ್ಯಾಯವಾದ ಮಾರ್ಗವನ್ನು ಸೂಚನೆ ಮಾಡಿಕೊಡುತ್ತೇನೆ, ತಾವು ಪರಿಶೀಲಿಸಿ ಎಂದು ಹೇಳಿದ್ದಾರೆ. ಅವರು ಕೊಟ್ಟಮೇಲೆ, ಸರ್ಕಾರದವರು ಅದನ್ನು ಪರಿಶೀಲಿಸಿ ರಾಜ್ಯದ, ಜನತೆಯ ಹಿತದೃಷ್ಟಿಯಿಂದ ಬೇಡ್ತಿ ವಿಚಾರದಲ್ಲಿ ಯಾವುದೇ ಪೂರ್ವ ಗ್ರಹಪೀಡಿತರಾಗಿ ತೆಗೆದುಕೊಳ್ಳುವುದಿಲ್ಲ ಮುಕ್ತ ತೀರ್ಮಾನ ಮನಸ್ಸಿನಿಂದ ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಒಂದು ಒಳ್ಳೆಯ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಇದರಲ್ಲಿ ಇವರು ಶರಾವತಿ ಟೇಲ್‌ರೇಸ್ ಬಗ್ಗೆ ಏನೂ ಹೇಳಲಿಲ್ಲ. ದಯಮಾಡಿ ನನ್ನ ಒಂದು ಪ್ರಶ್ನೆಗೆ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಅಧ್ಯಕ್ಷರು : ಈ ರೀತಿಯಾದರೆ ಸಭೆಯ ಕಾರ್ಯಕಲಾಪಗಳನ್ನು ನಡೆಸಲು ಸಾಧ್ಯವಾಗುವುದಿಲ್ಲ. ತಾವು ಏನೇ ಹೇಳಬೇಕಾಗಿದ್ದರೂ ಸಹ ಅದನ್ನು ಬರೆದು ಕಳಿಸಿ, ಅಥವಾ ಬೇರೆ ರೀತಿಯಲ್ಲಿ ಕೇಳಿ. ಒಂದೇ ಒಂದು ಪ್ರಶ್ನೆಗೆ 20 ನಿಮಿಷ ಕಳೆದುಹೋಗಿದೆ.

ತುಮಕೂರು ಜಿಲ್ಲೆಯಲ್ಲಿನ ರಸ್ತೆಗಳ ಡಾಂಬರೀಕರಣ

169 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಲೋಕೋಪಯೋಗಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ 3 ವರ್ಷದಿಂದ ಎಷ್ಟು ಡಾಂಬರ್ ಖರೀದಿಸಲಾಗಿದೆ?

ಆ) ಜಿಲ್ಲೆಯಲ್ಲಿ ಎಷ್ಟು ಕಿ.ಮೀ. ಡಾಂಬರ್ ರಸ್ತೆ ನಿರ್ಮಾಣವಾಗಿದೆ?

ಇ) ಜಿಲ್ಲೆಯಲ್ಲಿ ಡಾಂಬರ್ ಆಗಬೇಕಾಗಿರುವ ಲೋಕೋಪಯೋಗಿ ಇಲಾಖೆಯ ಎಷ್ಟು ಕಿಮೀ. ರಸ್ತೆ ಉಳಿದಿದೆ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ತುಮಕೂರು ಜಿಲ್ಲೆಯಲ್ಲಿ 3 ವರ್ಷದಿಂದ 4259 ಮೆಟ್ರಿಕ್ ಟನ್ ಡಾಂಬರನ್ನು ಖರೀದಿಸಲಾಗಿದೆ.

ಆ) ತುಮಕೂರು ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖಾ ವ್ಯಾಪ್ತಿಯ 1346 ಕಿಮೀ. ಉದ್ದದ ಡಾಂಬರು ಮೇಲ್ಮೈ ರಸ್ತೆ ನಿರ್ಮಾಣವಾಗಿದೆ.

ಇ) ತುಮಕೂರು ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ 1075 ಕಿಮೀ. ಉದ್ದ ರಸ್ತೆಯನ್ನು ಇನ್ನೂ ಡಾಂಬರು ಮಾಡಬೇಕಾಗಿದೆ.

ಶ್ರೀ ಟಿ.ಬಿ. ಜಯಚಂದ್ರ : ಸನ್ಮಾನ್ಯ ಅಧ್ಯಕ್ಷರೆ, ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ತುಮಕೂರು ಜಿಲ್ಲೆಯಲ್ಲಿ 3 ವರ್ಷದಿಂದ 4259 ಮೆಟ್ರಿಕ್ ಟನ್ ಡಾಂಬರನ್ನು ಖರೀದಿಸಲಾಗಿದೆ ಎಂದು ಹೇಳಿದ್ದಾರೆ. ನನ್ನ ಎರಡನೆಯ ಪ್ರಶ್ನೆಗೆ, ತುಮಕೂರು ಜಿಲ್ಲೆಯ ಲೋಕೋಪಯೋಗಿ ಇಲಾಖಾ ವ್ಯಾಪ್ತಿಯ 1346 ಕಿ.ಮೀ. ಉದ್ದದ ರಸ್ತೆಯ ಮೇಲ್ಮೈ ಡಾಂಬರು ನಿರ್ಮಾಣ ಮಾಡಲಾಗಿದೆ ಎಂದು ಹೇಳಿದ್ದಾರೆ. ದಯಮಾಡಿ ನನ್ನ ಕೆಳಗಿನ ಪ್ರಶ್ನೆಗಳಿಗೆ ಸಚಿವರು ಉತ್ತರವನ್ನು ಕೊಡಬೇಕೆಂದು ಕೇಳಬಯಸುವೆ. ಒಂದು ಕಿ.ಮೀ. ರಸ್ತೆಯನ್ನು ಮಾಡಲು ಎಷ್ಟು ಮೆಟ್ರಿಕ್ ಟನ್

ಡಾಂಬರ್ ಬೇಕು? ಮತ್ತು 3 ವರ್ಷದಲ್ಲಿ ಖರೀದಿಸಲಾಗಿರುವ 4259 ಮೆಟ್ರಿಕ್ ಟನ್ ಡಾಂಬರನ್ನು ಸಂಪೂರ್ಣವಾಗಿ ಬಳಕೆ ಮಾಡಿದ್ದೀರ? ಅದರಿಂದ ಎಷ್ಟು ಕಿ.ಮೀ. ರಸ್ತೆಯನ್ನು ಡಾಂಬರೀಕರಣ ಮಾಡಲು ಸಾಧ್ಯವಾಯಿತು.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಈಗ ಮೂರು ವರ್ಷಗಳಲ್ಲಿ ಸುಮಾರು 259 ಮೆಟ್ರಿಕ್ ಟನ್ ಕೊಡಲಾಗಿದೆ ಎಂದು ಈಗಾಗಲೇ ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಲಾಗಿದೆ. ಬಳಕೆಯಾಗಿರುವುದು 1991-92ರಲ್ಲಿ ಆಸ್‌ಫಾಲ್ಟಿಂಗ್ ಕೆಲಸಕ್ಕೆ 1310.34 ಮೆಟ್ರಿಕ್ ಮತ್ತು ರಿಪೇರಿಗೆ 502.25 ಮೆಟ್ರಿಕ್ ಟನ್, 1992-93ರಲ್ಲಿ 1460.50 ಮೆಟ್ರಿಕ್ ಟನ್ ರಿಪೇರಿಗೆ 535.61 ಮೆಟ್ರಿಕ್ ಟನ್, 1993-94ರಲ್ಲಿ 253.40 ಮೆಟ್ರಿಕ್ ಟನ್, ಆಸ್‌ಫಾಲ್ಟಿಂಗ್ ಕೆಲಸಕ್ಕೆ ಮತ್ತು ರಿಪೇರಿಗೆ 76.30 ಮೆಟ್ರಿಕ್ ಟನ್-ಒಟ್ಟು 4138.50 ಮೆಟ್ರಿಕ್ ಟನ್ ಈ ಮೂರು ವರ್ಷಗಳಲ್ಲಿ ಆಸ್‌ಫಾಲ್ಟಿಂಗ್ ಕೆಲಸಕ್ಕೆ ಮತ್ತು ರಿಪೇರಿ ಕೆಲಸಕ್ಕೆ ಖರ್ಚಾಗಿದೆ. ಹಾಗಾಗಿ 121 ಮೆಟ್ರಿಕ್ ಟನ್ ನಮ್ಮಲ್ಲಿ ಉಳಿಕೆಯಾಗಿದೆ. ಮಾನ್ಯ ಸದಸ್ಯರು 1 ಕಿ.ಮೀಗೆ ಎಷ್ಟು ಮೆಟ್ರಿಕ್ ಟನ್ ಬೇಕಾಗುತ್ತದೆ ಎಂಬ ಪ್ರಶ್ನೆಯನ್ನು ಕೇಳಿದ್ದಾರೆ. ನಾನು ಇಂಜಿನಿಯರ್ ಅಲ್ಲ, ಆದರೆ ನನಗೆ ತಿಳಿದ ಪ್ರಕಾರ 15 ಟನ್ ಬೇಕಾಗುತ್ತದೆ ಎಂದು ಹೇಳುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಮುಖ್ಯವಾಗಿ ನಾನು ಪ್ರಶ್ನೆ ಕೇಳತಕ್ಕದ್ದು ಏನೆಂದರೆ, ನಾನು ಕೂಡ, ಈ ವಿಷಯದಲ್ಲಿ ತಜ್ಞನಲ್ಲ, ಕಂಟ್ರಾಕ್ಟರ್‌ಕೂಡ ಅಲ್ಲದಿರುವುದರಿಂದ ಒಂದು ಕಿ.ಮೀ.ಗೆ ಒಂದು ಮೆಟ್ರಿಕ್ ಟನ್ ಸಾಕಾಗುತ್ತದೆ ಎನ್ನುವುದು ನನ್ನ ಕಲ್ಪನೆ ಹಾಗೆ ನೋಡಿಕೊಂಡರೆ ಮೂರು ವರ್ಷಗಳಲ್ಲಿ 4259 ಮೆಟ್ರಿಕ್‌ಟನ್ ನೀವು ಖರೀದಿ ಮಾಡಿರುವಂತಹ ಸಂದರ್ಭದಲ್ಲಿ ಅದನ್ನು ಸಂಪೂರ್ಣವಾಗಿ ಬಳಸಿದ್ದೇ ಆದರೆ ನಿಮ್ಮಿಂದ 1075 ಕಿ.ಮೀ. ಇರುವುದಕ್ಕೆ ಸಾಧ್ಯವಿಲ್ಲ. ತುಮಕೂರು ಜಿಲ್ಲೆಯಲ್ಲಿ ಸಂಪೂರ್ಣವಾಗಿ ಎಲ್ಲ ರಸ್ತೆಗಳೂ ಕೂಡ ಡಾಂಬರೀಕರಣ ಆಗಿರಬೇಕಾಗಿತ್ತು. ಆದರೆ ನೀವು ರಿಪೇರಿ ಎಷ್ಟೇ ಮಾಡಿ, ಇವತ್ತು ಈ ಪ್ರಮಾಣದಲ್ಲಿ ಉಳಿಯುವುದಕ್ಕೆ ಸಾಧ್ಯವಿಲ್ಲ. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಇವತ್ತು 4259 ಮೆಟ್ರಿಕ್‌ಟನ್ ಡಾಂಬರನ್ನು ನೀವು ಖರೀದಿ ಮಾಡಿದ್ದೀರಿ. ಇದಕ್ಕೆ ನೀವು ದುಡ್ಡನ್ನು ಕೊಟ್ಟಿದ್ದೀರಿ. ಆದರೆ ನನ್ನ ಕಳಕಳಿ ಏನೆಂದರೆ, ನೀವು ಖರೀದಿ ಮಾಡಿರುವುದರಲ್ಲಿ ಎಷ್ಟು ಬಂತು ಎನ್ನತಕ್ಕದ್ದು. ಬಂತು ಎಂದರೆ ಇದು ಯಾವ ರೀತಿ ಎಂದರೆ ರೋಡಿಗೆ ಎಷ್ಟು ಬಂದು ಬಿತ್ತು ಎನ್ನುವುದನ್ನು ಲೆಕ್ಕ. ಏಕೆಂದರೆ ಟಾರು ಎನ್ನುವುದು ಹೈಯಲಿ ಪ್ರೊಟಿನಸ್ ಫುಡ್. ಇದನ್ನು ಬಹುತೇಕ ಇಂಜಿನಿಯರ್‌ಗಳು ತಿನ್ನುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅದಕ್ಕೋಸ್ಕರ ನನಗೆ ಅನುಮಾನ ಇರತಕ್ಕದ್ದು. ಡಾಂಬರ್ ಕೊಂಡಿದ್ದರಲ್ಲಿ ಎಷ್ಟು ಉಪಯೋಗವಾಗಿದೆ, ಎಷ್ಟು ದುರುಪಯೋಗವಾಗಿದೆ ಎಂಬುದು ಮುಖ್ಯವಾಗಿ ನನಗೆ ಬೇಕಾಗಿತ್ತು. ಆ ದೃಷ್ಟಿಯಿಂದ ನಾನು ಕೇಳಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಾ, 1 ಕಿ.ಮೀ.ಗೆ 1 ಟನ್ ಎಂದು ಹೇಳಿದ್ದಾರೆ. ಅದು ಸರಿಯಾದ ವಿಚಾರವಲ್ಲ. 1 ಕಿ.ಮೀಗೆ ಉದ್ದದ ಸಿಂಗಲ್ ಲೈನ್ ಎಂದು ಹೇಳುತ್ತಾರೆ. 3.75 ಮೀಟರ್ ಅಗಲದ ರಸ್ತೆಗೆ 15 ಟನ್ ಟಾರ್ ಬೇಕಾಗುತ್ತದೆ. 1 ಕಿ.ಮೀ.ಗೆ 1 ಟನ್ ಆಗಿಬಿಟ್ಟರೆ 2 ವರ್ಷದೊಳಗೆ ಎಲ್ಲಾ ಮಾಡಿ ಮುಗಿಸಬಹುದು. ಆದುದರಿಂದ ನಾನು ಈಗಾಗಲೇ ಹೇಳಿದ್ದೇನೆ. 4138.5 ಮೆಟ್ರಿಕ್‌ಟನ್ ಖರ್ಚಾಗಿದೆ ಮತ್ತು ಉಳಿಕೆಯಾಗಿರುವುದು ಇಷ್ಟು ಟನ್ ರಸ್ತೆಗೆ ಖರ್ಚು ಮಾಡಿದ್ದೇವೆ ಎನ್ನುವುದು ನನ್ನಲ್ಲಿರುವಂತಹ ಅಂಕಿಅಂಶಗಳು. ಯಾವುದಾದರೂ ರಸ್ತೆಯ ಅವ್ಯವಹಾರ ನಡೆದಿರತಕ್ಕದ್ದು ಮಾನ್ಯ ಸದಸ್ಯರಿಗೆ ಗೊತ್ತಿದ್ದರೆ ಅದನ್ನು ನನಗೆ ಬರೆದು ಕಳುಹಿಸಿದರೆ ನಾನು ವಿಚಾರ ಮಾಡಿಸುತ್ತೇನೆ.

12.30 ಪಿ.ಎಂ

ಶ್ರೀ ಡಿ.ಬಿ. ಜಯಚಂದ್ರ : ಮಾನ್ಯ ಸಭಾಧ್ಯಕ್ಷರೆ, ಕೊನೆಯದಾಗಿ ನಾನು ಕೇಳತಕ್ಕಂಥದ್ದು ಏನೆಂದರೆ, ನೀವು ಎಲ್ಲಿ ಹೋದರೂ ಕೂಡ ಡಾಂಬರ್ ಏನು ಇದೆ ಅದು ಖಾಸಗಿಯಾಗಿ ಎಲ್ಲಿ ಬೇಕಾದರೂ ಸಿಗುವಂತಹ ಮಟ್ಟಕ್ಕೆ ಇದೆ. ನಮ್ಮ ಕ್ಷೇತ್ರದಲ್ಲಿ ಅನೇಕ ಕಡೆ ಇವತ್ತು ಡಾಂಬರ್ ಪ್ರೈವೇಟ್‌ನವರು ಕೊಂಡುಕೊಂಡಿರುವಂತಹ ಸಂದರ್ಭಗಳು ಬೇಕಾದಷ್ಟು ಇದೆ. ಅದಕ್ಕೋಸ್ಕರ ನಾನು ಹೇಳತಕ್ಕಂಥದ್ದು ಏನೆಂದರೆ ಇದರಲ್ಲಿ ಸಂಪೂರ್ಣವಾಗಿ ದುರುಪಯೋಗವಾಗಿದೆ. ನಾನು ಲಿಖಿತವಾಗಿ ಬರೆದುಕೊಡುವುದಕ್ಕಿಂತ ಹೆಚ್ಚಾಗಿ ನಾನು ಈ ಸದನದಲ್ಲಿ ಹೇಳುತ್ತಿರತಕ್ಕಂಥಾದ್ದನ್ನೇ ದಯವಿಟ್ಟು ಆಧಾರವಾಗಿ ಇಟ್ಟುಕೊಂಡು, ಸಮಗ್ರವಾಗಿ ತನಿಖೆ ಮಾಡಿಸಿ ಇದು ಸಂಪೂರ್ಣವಾಗಿ ಖರ್ಚಾಗಿದೆಯೇ ಇಲ್ಲವೇ ಎಂದು ತಾವು ತನಿಖೆ ಮಾಡಿಸಿದರೆ ತಮಗೆ ನಿಜಾಂಶ ಏನೆಂದು ಗೊತ್ತಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್ : 4259 ಮೆಟ್ರಿಕ್ ಟನ್ ಡಾಂಬರು ಸಂಪೂರ್ಣವಾಗಿ ದುರುಪಯೋಗಿದೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. ದುರುಪಯೋಗ ಆಗಿರಬಹುದು, ಮಾನ್ಯ ಸದಸ್ಯರು ಬರೆದು ತಿಳಿಸಲಿ, ಯಾವುದಾದರೂ ಭಾಗದಲ್ಲಿ ಯಾವುದೇ ರಸ್ತೆಯಲ್ಲಿ ಸರಿಯಾಗಿ ಆಗದೇ ಇರತಕ್ಕಂಥದ್ದು ಮಾಡಿದ್ದೇವೆಂದು ಹೇಳಿ ಬರೆದುಕೊಂಡು, ಅದು ಮಾಡದೇ ಇರತಕ್ಕಂಥದ್ದು ಇದ್ದರೆ ಇಂತದ್ದು, ಎಂದು ಬರೆದು ತಿಳಿಸಿದರೆ ನಾನು ವಿಚಾರಣೆ ಮಾಡಿಸುತ್ತೇನೆ.

ಅಧ್ಯಕ್ಷರು : ಶ್ರೀ ಡಿ.ಆರ್. ಪಾಟೀಲ್‌ರವರೆ ತಮ್ಮ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಒಂದು ವಾರ ಕಾಲಾವಕಾಶ ಕೇಳಿದ್ದಾರೆ.

ಪ್ರಶ್ನೋತ್ತರ ಕಾಲ ಮುಗಿಯಿತು ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

(ಹಲವಾರು ಸದಸ್ಯರು ಸದನದ ಬಾವಿಗೆ ಬಂದರು)

(ಗೊಂದಲ)

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ನೀಡಲಾದ ಉತ್ತರಗಳು

ಶ್ರೀ ಹಾರನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ 9ನೇ ಪಟ್ಟಿಯಲ್ಲಿರುವ 52 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 4, 637, 651, 684, 232, 579ಎ, 349, 479, 558, 671, 557, 234, 529, ಈ ಪ್ರಶ್ನೆಗಳನ್ನು ಹೊರತುಪಡಿಸಿ ಉಳಿದ 39 ಪ್ರಶ್ನೆಗಳ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಇಂಡಿ ತಾಲ್ಲೂಕಿನಲ್ಲಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿಗಾಗಿ ಗುರುತಿಸಲಾದ ಹಳ್ಳಿಗಳು

44 - ಶ್ರೀ ಮನೋಹರ್ ಯು. ಐನಾಪುರ (ಬಳ್ಳೊಳ್ಳಿ) : ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ತಾಲ್ಲೂಕಿನಲ್ಲಿ ಅಚ್ಚು ಕಟ್ಟು ಪ್ರದೇಶ ಅಭಿವೃದ್ಧಿಗಾಗಿ ಗುರುತಿಸಲಾದ ಹಳ್ಳಿಗಳ ಸಂಖ್ಯೆಗಳು

ಆ) ಪ್ರಸಕ್ತ ವರ್ಷದಲ್ಲಿ ಈ ಹಳ್ಳಿಗಾಗಿ ವೆಚ್ಚ ಮಾಡಿರುವ ಹಣ?